20 ನಗರಗಳಲ್ಲಿ ನಡೆದಿದ್ದ ಆಯ್ಕೆ ಪ್ರಕ್ರಿಯೆ • ಅಂತಿಮ ಸ್ಪರ್ಧೆಯಲ್ಲಿ ಭಾಗವಹಿಸಿದ್ದ 126 ಮಕ್ಕಳು

# ಬಾಲ ವಿಜ್ಞಾನಿಗಳಿಗೆ 'ಸಿ.ವಿ.ರಾಮನ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಜ್ಞಾನದ ವಿಷಯ ಸಾಮಾನ್ಯ ಜನರಿಗೂ ಅರ್ಥವಾಗುವ ರೀತಿಯಲ್ಲಿ ಪ್ರಾತ್ಯಕ್ಷಿಕೆ ನೀಡಿದ ಬಾಲ ವಿಜ್ಞಾನಿಗಳಿಗೆ ಸಿ.ವಿ.ರಾಮನ್ ಹೆಸರಿನಲ್ಲಿ 'ರಾಮನ್ ಯುವ ವಿಜ್ಞಾನ ಸಂಶೋಧಕ ಪ್ರಶಸ್ತಿ' ನೀಡಿ ಪ್ರೋತ್ಸಾಹಿಸಲಾಯಿತು.

ಮಲ್ಲೇಶ್ವರದಲ್ಲಿರುವ ಸಿ.ವಿ. ರಾಮನ್ ಅವರ ಮನೆ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಅಂತಿಮ ಹಂತದ ವಿಜ್ಞಾನ ಮಾದರಿ ಪ್ರದರ್ಶನ ಸ್ಪರ್ಧೆಯಲ್ಲಿ ಉತ್ತಮ ಪ್ರಾತ್ಯಕ್ಷಿಕೆ ಪ್ರದರ್ಶಿಸಿದ ಮಕ್ಕಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು.

ಪ್ರಾಥಮಿಕ ಶಾಲಾ (3ರಿಂದ 4ನೇ ತರಗತಿ) ವಿಭಾಗದಲ್ಲಿ ಮುಂಬೈನ ಮಂದಾರ್ ಕೊಲ್ಲತ್ಕರ್ ಮೊದಲ ಸ್ಥಾನ ಪಡೆದ. ಎನ್.ಕೆ. ಶ್ವೇತಾ, ಬೆಂಗಳೂರಿನ ಎನ್.ಆರ್.ನಿಹಾರ್, ತ್ರಿಪುರಾದ ಸುಮಾದಿತ್ಯಾ ಪಾಲ್ ರನ್ನರ್ ಅಪ್ ಆದರು.

ಮಾಧ್ಯಮಿಕ ಶಾಲಾ ವಿಭಾಗದಲ್ಲಿ ಧಾರವಾಡದ ಸುಮಾ ತುರಮರಿ ಮೊದಲ ಸ್ಥಾನ ಪಡೆದಳು. ರನ್ನರ್ ಅಪ್‌ಗೆ ಮಧುರೈನ ಕೆ.ಎಂ.ಜಗದೀಶ್ವರ್ ಹಾಗೂ ಸುಹಾಮ್ ಜೋಶಿ ಪಾತ್ರರಾದರು.

ಪ್ರೌಢಶಾಲಾ ವಿಭಾಗದಲ್ಲಿ ಅನಿಕೇತ್ ವೇಣುಗೋಪಾಲ ಮೊದಲ ಸ್ಥಾನ ಪಡೆದ. ಕೆ.ವಿನಾಯಕಪ್ರಭು ಹಾಗೂ ಶ್ರೇಷ್ಠ ಯಾದವ ರನ್ನರ್ ಅಪ್ ಆದರು.

ಮೊದಲ ಸ್ಥಾನ ಪಡೆದವರಿಗೆ ತಲಾ ₹20,000 ನಗದು ಮತ್ತು ₹7,000 ಮೊತ್ತದ ಕಿಟ್ ಹಾಗೂ ರನ್ನರ್ ಅಪ್ ಆದವರಿಗೆ ತಲಾ ₹5,000 ನಗದು ಮತ್ತು ₹4,000 ಮೊತ್ತದ ಕಿಟ್ ನೀಡಲಾಯಿತು.

**ಉತ್ತಮ ಶಿಕ್ಷಕ ಪ್ರಶಸ್ತಿ:** ವಿಜ್ಞಾನ ವಿಷಯಗಳನ್ನು ವಿಭಿನ್ನ ರೀತಿಯಲ್ಲಿ ಮಕ್ಕಳಿಗೆ ಕಲಿಸುವ ಶಿಕ್ಷಕರಿಗೆ ವಿಶೇಷ ಪ್ರಶಸ್ತಿ ನೀಡಲಾಯಿತು.

ಮೊದಲ ಸ್ಥಾನ ಪಡೆದ ಶಿಕ್ಷಕರಿಗೆ ತಲಾ ₹25,000 ನಗದು ಮತ್ತು ಪ್ರಮಾಣ ಪತ್ರ ಹಾಗೂ ರನ್ನರ್ ಅಪ್ ಪಡೆದವರಿಗೆ ತಲಾ 10,000, ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು.

ಭೌತಶಾಸ್ತ್ರ ವಿಭಾಗದಲ್ಲಿ ಖುಷ್ಬು ಲಾಹೋಟಿ (ಮೊದಲ ಸ್ಥಾನ), ಮನಮೋಹನ್ (ರನ್ನರ್ ಅಪ್), ರಸಾಯನಶಾಸ್ತ್ರ ವಿಭಾಗದಲ್ಲಿ ತಾರಾಕಿರಣ್ ಕುರ್ಲೆ (ಮೊದಲ ಸ್ಥಾನ), ಮೀನಾ ದೇವರ್ಕರ್ (ರನ್ನರ್ ಅಪ್) ಹಾಗೂ ಜೀವಶಾಸ್ತ್ರ ವಿಭಾಗದಲ್ಲಿ ಕೆ.ಎನ್. ನಿತ್ಯಾ (ಮೊದಲ ಸ್ಥಾನ), ಜ್ಞಾನೇಶ್ವರ್ ಗೋಮತಿ (ರನ್ನರ್ ಅಪ್) ಪ್ರಶಸ್ತಿ ಪಡೆದರು.

**ಪ್ರಶಸ್ತಿ ಪ್ರದಾನ ಸಮಾರಂಭ:** ರಾಮನ್ ಅವರ ಮನೆ ಆವರಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಿ.ವಿ. ರಾಮನ್ ಅವರ ಸೊಸೆ ಡಾಮಿನಿಕ್ಯೂ ರಾಧಾಕೃಷ್ಣನ್ ಅವರಿ ಮಕ್ಕಳು ಹಾಗೂ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಾಧ್ಯಾಪಕ ಕೆ.ಎಸ್.ದ್ವಾರಕನಾಥ್ ಹಾಗೂ ಡಾ. ಜಯಂತ ಮೂರ್ತಿ ಹಾಜರಿದ್ದರು.

## ರಾಷ್ಟ್ರೀಯ ಸ್ಪರ್ಧೆ

ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಟ್ರಸ್ಟ್, ಇನ್ನೋವೇಷನ್ ಆ್ಯಂಡ್ ಸೈನ್ಸ್ ಪ್ರಮೋಷನ್ ಫೌಂಡೇಶನ್ (ಐಎಸ್‌ಪಿಎಫ್), ಥಿಂಕ್‌ಟ್ಯಾಂಕ್ ವತಿಯಿಂದ ದೇಶದಾದ್ಯಂತ ಹಮ್ಮಿಕೊಂಡಿದ್ದ ಸ್ಪರ್ಧೆಗೆ 5,356 ವಿದ್ಯಾರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದರು.

ಆ ಪೈಕಿ 1,187 ವಿದ್ಯಾರ್ಥಿಗಳು ದೇಶದ 20 ನಗರಗಳಲ್ಲಿ ನಡೆದ ಪ್ರಾದೇಶಿಕ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದರು. 126 ಮಕ್ಕಳನ್ನು ಅಂತಿಮ ಹಂತಕ್ಕೆ ಆಯ್ಕೆ ಮಾಡಲಾಗಿತ್ತು.



ಸಮಾರಂಭದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಗುಂಪು ಛಾಯಾಚಿತ್ರ ತೆಗೆಸಿಕೊಂಡರು. ಸಿ.ವಿ.ರಾಮನ್ ಅವರ ಸೊಸೆ ಡಾಮಿನಿಕ್ಯೂ ರಾಧಾಕೃಷ್ಣನ್, ಪ್ರಾಧ್ಯಾಪಕ ಕೆ.ಎಸ್.ದ್ವಾರಕನಾಥ್ ಹಾಗೂ ಜಯಂತಮೂರ್ತಿ ಚಿತ್ರದಲ್ಲಿ ಇದ್ದಾರೆ ಪ್ರಜಾವಾಣಿ ಚಿತ್ರ